# ಶ್ರೀಮಾತೆಯವರೊಡನೆ ಮಾತುಕತೆ



### ಸರಯೂ ಬಾಲಾ ದೇವಿ ಅವರ ನೆನಪುಗಳು

ಫೆಬ್ರವರಿ ೧೯೧೪

ಒಂದು ದಿನ ಮುಂಜಾನೆಯೇ ತೋಟದಿಂದ ಬಹಳಷ್ಟು ಹೂವುಗಳನ್ನು ತೆಗೆದುಕೊಂಡು ಹೋಗಿದ್ದೆ. ಶ್ರೀಮಾತೆಗೆ ಅವುಗಳನ್ನು ಕೊಟ್ಟೆ. ಅವರು ಬಹಳ ಆನಂದದಿಂದ ಶ್ರೀರಾಮಕೃಷ್ಣರ ಮೂರ್ತಿಯ ಬಳಿ ಅವುಗಳನ್ನು ಜೋಡಿಸಲಾರಂಭಿಸಿದರು. ನೀಲಿಬಣ್ಣದ ಒಂದು ಬಗೆಯ ಹೂವುಗಳನ್ನು ಕೈಯ್ಯಲ್ಲಿ ತೆಗೆದುಕೊಂಡು ಹೀಗೆ ಹೇಳಲಾರಂಭಿಸಿದರು: "ಅಬ್ಬಾ! ನೋಡಿದೆಯಾ ಈ ಬಣ್ಣ! ದಕ್ಷಿಣೇಶ್ವರದಲ್ಲಿ ಆಶಾ ಎಂಬ ಒಬ್ಬಳು ಹುಡುಗಿ ಇದ್ದಳು. ಅವಳು ಒಮ್ಮೆ ಗಾಢಹಸಿರು ಬಣ್ಣದ ಎಲೆಗಳುಳ್ಳ ಗಿಡದಿಂದ ಕೆಂಪು ಹೂವೊಂದನ್ನು ಕಿತ್ತು ಕೈಲಿ ತೆಗೆದುಕೊಂಡು ಒಂದೇ ಸಮನೆ, 'ಎಷ್ಟು ಕೆಂಪಾಗಿದೆ ಈ ಹೂವು. ಅದರ ಜೊತೆಗೆ ಇಷ್ಟು ಕಪ್ಪು ಎಲೆಗಳು. ಹೇ ದೇವ! ಎಷ್ಟು ವಿಚಿತ್ರ ನಿನ್ನ ಈ ಸೃಷ್ಟಿ' ಎಂದು ಹೇಳುತ್ತಾ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಶ್ರೀರಾಮಕೃಷ್ಣರು ಇದನ್ನು ನೋಡಿ, 'ಏನಾಯಿತು? ಏಕೆ ಅಳುತ್ತಿರುವೆ ?' ಎಂದು ವಿಚಾರಿಸಿದರು. ಅವಳು ಏನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ಬಹಳ ಹೊತ್ತು ಮಾತನಾಡಿಸಿ ಅವಳನ್ನು ಸಮಾಧಾನ ಮಾಡಿದರು. ಆಹಾ! ಈ ಹೂವುಗಳು ಎಷ್ಟು ನೀಲಿಬಣ್ಣದ್ದಾಗಿವೆ, ನೋಡು? ಇವುಗಳು (ಬಣ್ಣಬಣ್ಣದ ಹೂವುಗಳು) ಇಲ್ಲದಿದ್ದರೆ ಭಗವಂತನ ಅಲಂಕಾರ ಸಾಧ್ಯವೇ?" ಹೀಗೆ ಹೇಳುತ್ತ ಶ್ರೀಮಾತೆಯವರು ಬೊಗಸೆ ಬೊಗಸೆ ಹೂವುಗಳನ್ನು ತೆಗೆದುಕೊಂಡು ಶ್ರೀರಾಮಕೃಷ್ಣರಿಗೆ ಪುಷ್ಪಾಂಜಲಿ ನೀಡಲಾರಂಭಿಸಿದರು. ಮೊದಲ ಬಾರಿ ಪುಷ್ಪಾಂಜಲಿ ನೀಡುವ ಮೊದಲೇ ಕೆಲವು ಹೂವುಗಳು ಕೈಜಾರಿ ಅವರ ಪಾದಪದ್ಮಗಳ ಮೇಲೆ ಬಿದ್ದವು. ಶ್ರೀಮಾತೆ, "ಓ ಅಮ್ಮಾ, ಮೊದಲು ನನ್ನ ಕಾಲುಗಳ ಮೇಲೇ ಬಿತ್ತಲ್ಲ!" ಎಂದು ಉದ್ಗರಿಸಿದರು. "ಅದು ಒಳ್ಳೆಯದೇ ಆಯಿತು" ಎಂದು ನಾನು ಅವರಿಗೆ ಹೇಳಿದೆ; "ನಿಮಗೆ ಠಾಕೂರ್ ದೊಡ್ಡವರಾಗಿರಬಹುದು. ಆದರೆ ನಮ್ಮ ದೃಷ್ಟಿಯಲ್ಲಿ ನೀವಿಬ್ಬರೂ ಒಂದೇ" ಎಂದು ಮನಸ್ಸಿನಲ್ಲಿಯೇ ಅಂದುಕೊಂಡೆ.

ಒಬ್ಬಳು ವಿಧವೆ ಬಂದಿದ್ದಾಳೆ. ಅವರನ್ನು ಕುರಿತಾಗಿ ಶ್ರೀಮಾತೆ, "ಕೆಲವು ತಿಂಗಳ ಹಿಂದೆ ಇವಳಿಗೆ ದೀಕ್ಷೆ ಆಗಿದೆ. ಹಿಂದೆ ಬೇರೆ ಗುರುವಿನ ಬಳಿ ದೀಕ್ಷೆಯಾಗಿದ್ದರೂ ಮನಸ್ಸಿನ ಭ್ರಾಂತಿ. ಮತ್ತೆ ನನ್ನ ಬಳಿಯೂ ತೆಗೆದುಕೊಂಡಳು. ಗುರುಗಳೆಲ್ಲಾ ಒಂದೇ ಎಂದು ಇವಳಿಗೆ ಅರ್ಥವೇ ಆಗುವುದಿಲ್ಲ" ಎಂದರು.

ಮಧ್ಯಾಹ್ನದ ಊಟದ ನಂತರ ವಿಶ್ರಮಿಸುತ್ತಿದ್ದೆವು. ಆಗ ಕಾಮಾರ್‌ಪುಕುರದ ಮಾತು ಬಂತು. ಶ್ರೀಮಾತೆ ಹೇಳುತ್ತಿದ್ದಾರೆ, "ಒಮ್ಮೆ ಶ್ರೀರಾಮಕೃಷ್ಣರು ಹೊಟ್ಟೆ ಕೆಟ್ಟಿದ್ದರಿಂದ ಕಾಮಾರ್‌ಪುಕುರಕ್ಕೆ ಹೋಗಿದ್ದರು. ನಾನು ಆಗ ಇನ್ನೂ ಚಿಕ್ಕವಳು. ಬೆಳಗಿನ ಜಾವದಲ್ಲೇ ಎದ್ದು 'ಇಂಥಿಂಥ ಪಲ್ಯಗಳನ್ನು ಮಾಡು' ಎಂದು ಹೇಳುತ್ತಿದ್ದರು. ನಾವು (ನಾನು, ಲಕ್ಷ್ಮಿದೀದಿ–ಶ್ರೀರಾಮಕೃಷ್ಣರ ಅಣ್ಣನ ಮಗಳು) ಆ ರೀತಿಯೇ ಮಾಡಿಡುತ್ತಿದ್ದೆವು. ಒಂದು ದಿನ ಒಗ್ಗರಣೆಗಾಗಿ ಪಾಂಚ್‌ಫೋಡನ್ ಇರಲಿಲ್ಲ. (ಐದು ತರಹ ಮಸಾಲೆ ಸಾಮಾನುಗಳನ್ನು ಹಾಕಿ ಒಗ್ಗರಣೆ ಕೊಡುವುದು. ಇದು ಬಹಳ ಸುಗಂಧಮಯ.) ಲಕ್ಷ್ಮಿದೀದಿ, "ಇಲ್ಲದಿದ್ದರೆ ಏನು ಮಾಡುವುದು. ಹಾಗೆಯೇ ಸಾಧಾರಣ ಒಗ್ಗರಣೆ ಕೊಟ್ಟರಾಯಿತು" ಎಂದಳು. ಅದನ್ನು ಕೇಳಿ ಶ್ರೀರಾಮಕೃಷ್ಣರು, "ಅದ್ಹೇಗೆ ಆಗುತ್ತೆ? ಮಸಾಲೆ ಇಲ್ಲದಿದ್ದರೆ ಎರಡು ಪೈಸೆ ಕೊಟ್ಟು ಕೊಂಡುಕೊಂಡರಾಯಿತು. ಆಯಾ ವ್ಯಂಜನಕ್ಕೆ ತಕ್ಕ ಸಾಮಾನುಗಳನ್ನು ಹಾಕದಿದ್ದರೆ ಹೇಗೆ? ನಿಮ್ಮ ಒಗ್ಗರಣೆಯ ಸುವಾಸನೆಗಾಗಿ ನಾನು ಅಲ್ಲಿನ (ದಕ್ಷಿಣೇಶ್ವರದ) ಸಾರು, ಪಾಯಸದ ಬಟ್ಟಲನ್ನು ಬಿಟ್ಟು ಬಂದೆ. ಅದನ್ನು ನೀವು ಕೊಡದಿದ್ದರೆ ಹೇಗೆ?" ಎಂದರು.

"ಲಜ್ಜೆಯಿಂದ ಲಕ್ಷ್ಮೀದೀದಿ ಮಸಾಲೆ ಪದಾರ್ಥಗಳನ್ನು ತರಲು ಹೇಳಿಕಳುಹಿಸಿದಳು. ಆ ಸಮಯದಲ್ಲಿ ಭೈರವಿ ಬ್ರಾಹ್ಮಣಿ ಸಹ ಅಲ್ಲಿದ್ದಳು. ಠಾಕೂರ್ ಆಕೆಯನ್ನು, 'ಅಮ್ಮಾ' ಎಂದು ಸಂಬೋಧಿಸುತ್ತಿದ್ದರು. ನಾನು ಸಹ ಆಕೆಯನ್ನು ಅತ್ತೆಯಂತೆ ಕಾಣುತ್ತಿದ್ದೆ ಹಾಗೂ ಭಯಪಡುತ್ತಿದ್ದೆ. ಆಕೆ ಬಹಳ ಖಾರ ತಿನ್ನುತ್ತಿದ್ದಳು. ತನ್ನ ಅಡುಗೆ ತಾನೇ ಮಾಡಿಕೊಳ್ಳುತ್ತಿದ್ದಳು. ಎಲ್ಲವೂ ಖಾರಮಯ. ನನಗೆ ಸಹ ತಿನ್ನಲು ಹೇಳುತ್ತಿದ್ದಳು. ನಾನು ಕಣ್ಣೊರೆಸಿಕೊಳ್ಳುತ್ತಾ ತಿನ್ನುತ್ತಿದ್ದೆ. ಮಧ್ಯೆ ಮಧ್ಯೆ 'ಹೇಗಿದೆ?' ಎಂದು ಕೇಳುತ್ತಿದ್ದಳು. ಭಯದಿಂದ 'ಚೆನ್ನಾಗಿದೆ' ಎಂದು ಹೇಳುತ್ತಿದ್ದೆ. ರಾಮಲಾಲನ ತಾಯಿ "ಆಹಾ! ಎಷ್ಟು ಖಾರ ಅಂದರೆ....." ಎನ್ನುತ್ತಿದ್ದಳು. ಇದರಿಂದ ಬ್ರಾಹ್ಮಣಿ ತುಂಬಾ ಕೋಪಗೊಳ್ಳುತ್ತಿದ್ದಳು. ಅಸಂತುಷ್ಟಿಯಿಂದ, 'ನನ್ನ ಸೊಸೆ ಚೆನ್ನಾಗಿದೆ ಎಂದು ಹೇಳಿದ್ದಾಳೆ. ನಿನಗಂತೂ ಯಾವುದೂ ಚೆನ್ನಾಗಿರುವುದಿಲ್ಲ. ಇನ್ನು ಮುಂದೆ ನಿನಗೆ ಏನೂ ಕೊಡುವುದಿಲ್ಲ' ಎಂದು ಹೇಳಿದಳು." ಶ್ರೀಮಾತೆ ಇದನ್ನೆಲ್ಲಾ ವರ್ಣಿಸುತ್ತಾ ನಗಲಾರಂಭಿಸಿದರು.

(*ಮುಂದುವರಿಯುವುದು*)